



# ಸ್ವಪ್ರಯತ್ನದ ಹಾದಿಯಲ್ಲಿ ಬಣ್ಣದ ಲೋಕ ಸಿಕ್ಕಿದೆ

## ವಿನೋದ್ ಪಾಟೀಲ್

### ಸ್ಟಾರ್ ಸುವರ್ಣದ 'ಮಹಾರಾಣಿ'ಯ ವರುಣ್

❖ *ನಿಮ್ಮ ಪರಿಚಯವನ್ನು ಹೇಳಿ?*

ನಮ್ಮೂರು ಹುಬ್ಬಳ್ಳಿ. ಕೆಲಸದ ಸಂಬಂಧ ಬೆಂಗಳೂರಿಗೆ ಬಂದೆ. ಮಧ್ಯಮ ವರ್ಗದ ಕುಟುಂಬ. ನನ್ನ ಅಭಿಲಾಷೆಯನ್ನು ಪ್ರೋತ್ಸಾಹಿಸಲು ಆರ್ಥಿಕ ಬೆಂಬಲ ಇರಲಿಲ್ಲ. ಅದಕ್ಕಾಗಿ ನನ್ನ ದುಡಿಮೆ ಅನಿವಾರ್ಯವಾಗಿತ್ತು. ನಾಲ್ಕು ವರ್ಷ ಬಾಷ್ ಎನ್ನುವ ಎಂಎನ್‌ಸಿ ಕಂಪನಿಯಲ್ಲಿ ಕೆಲಸ ಮಾಡಿದೆ. ಕೆಲಸ ಆರಂಭಿಸಿದ ಸ್ವಲ್ಪ ದಿನಗಳಲ್ಲಿಯೇ ಪ್ರಸಾದ್ ಬಿಡ್ಡಪ್ಪ ಅವರ ಜೊತೆ ಮಾಡೆಲಿಂಗ್ ಆರಂಭಿಸಿದೆ. ನೀಲಕಂಠ ಜ್ಯುವೆಲ್ಸ್‌ಗೂ ಸ್ವಲ್ಪ ದಿನ ರೂಪದರ್ಶಿಯಾಗಿದ್ದೆ. ಅದೇ ಸಮಯದಲ್ಲಿ 'ಜಸ್ಟ್ ಆಕಸ್ಮಿಕ' ಸಿನಿಮಾದಲ್ಲಿ ನಾಯಕ ನಟನಾಗಿ ಅಭಿನಯಿಸಿದೆ. ಅದರ ಬೆನ್ನ ಹಿಂದೆಯೇ ಎರಡು ಸಿನಿಮಾಗಳಲ್ಲಿ ನಟಿಸಿದ್ದೇನೆ. ಕಿರುತೆರೆಯಲ್ಲಿ ಇದೇ ನನ್ನ ಮೊದಲ ಧಾರಾವಾಹಿ.

❖ *ಆಡಿಷನ್ ಬಗ್ಗೆ ಏನು ಹೇಳುತ್ತೀರಿ?*

ಆಡಿಷನ್ ಸರಿಯಾದ ಕ್ರಮ ಎನ್ನುವುದು ನನ್ನ ಅಭಿಪ್ರಾಯ. ನಾನು ಸಾಕಷ್ಟು ಆಡಿಷನ್‌ಗಳನ್ನು ಅಟೆಂಡ್ ಮಾಡಿದ್ದೇನೆ. ಇದೇ ಧಾರಾವಾಹಿಗೆ ಐದಾರು ಬಾರಿ ಹಾಜರಾಗಿದ್ದಿದೆ. 'ಮಹಾರಾಣಿ' ನನ್ನ ಗೆಳೆಯನಿಗೆ ಬಂದ ಅವಕಾಶ. ಆತ ಬೇರೆ ಕೆಲಸದಲ್ಲಿ ನಿರತನಾಗಿದ್ದರಿಂದ ನನಗೆ ಹೇಳಿದ. ಮೊದಲ ದಿನ ಹೋದಾಗ ಸ್ಕ್ರಿಪ್ಟ್ ಕೊಟ್ಟರು. ನೋಡಿದಾಗ ನಿಜಕ್ಕೂ ದಂಗಾಗಿ ಬಿಟ್ಟೆ. ಏಕೆಂದರೆ ಶೇ. 90ರಷ್ಟು ಭಾಗ ನನ್ನ ವ್ಯಕ್ತಿತ್ವವನ್ನೇ ಹೋಲುವ ಪಾತ್ರ ಎಂದೆನಿಸಿತು. ಪಾತ್ರದ ವರ್ತನೆ ಕಠೋರ ಆಗಿದ್ದರೂ ಸೂಕ್ಷ್ಮ ಮನಸ್ಸಿನ ವ್ಯಕ್ತಿ. ಒಳ್ಳೆಯದನ್ನು ಬೆಂಬಲಿಸುವ, ಕೆಟ್ಟದ್ದನ್ನು ನಿಷ್ಠುರವಾಗಿ ವಿರೋಧಿಸುವಂತವನು. ಕಠಿಣ ಪರಿಶ್ರಮವನ್ನು ಪ್ರೀತಿಸುವ ಗುಣವಿದೆ.

❖ *ನಟನಾಗಬೇಕು ಎನ್ನುವ ಗೀಳು ಹುಟ್ಟಿದ್ದು ಹೇಗೆ?*

ನನ್ನ ತಂದೆ ರೈಲ್ವೆ ಇಲಾಖೆಯಲ್ಲಿ ಉದ್ಯೋಗಿ. ಒಮ್ಮೆ ನನ್ನ ಸಹೋದರನ ಜೊತೆ ತಂದೆ ಕಚೇರಿಗೆ ಹೋಗಿದ್ದೆ. ನನ್ನನ್ನು ನೋಡಿದ ನನ್ನ ತಂದೆಯ ಸ್ನೇಹಿತ 'ಇವನು ನಿಮ್ಮ ಮಗಾನೇನ್ರೀ, ಸಿನಿಮಾ ಸ್ಟಾರ್ ಥರಾ ಇದ್ದಾನಲ್ರೀ' ಅಂದಿದ್ದರು. ಅದಕ್ಕೆ ನಮ್ಮ ಅಪ್ಪ 'ಚೊಲೋತ್ನಾಗ ಓದಿದ್ರ ಸಾಕ್ರಿಯಪ, ನಮಗೆಲ್ಲಾ ಯಾಕ ಬೇಕ ಸಿನಿಮಾ ಗಿನಿಮಾ' ಅಂದಿದ್ದರು. ಆದರೆ, ಅದು ಎಲ್ಲೋ ಸುಪ್ತವಾಗಿ ನನ್ನ ಮನಸ್ಸಿನಲ್ಲಿ ನೆಲೆಯೂರಿದೆ. ಅದಕ್ಕೆ ನಾನು ಉದ್ಯೋಗಕ್ಕೆ ಸೇರುವತನಕ ನೀರೆರೆಯಲು ಸಾಧ್ಯವಾಗಲೇ ಇಲ್ಲ. ಕೆಲಸಕ್ಕೆ ಸೇರಿದ ಮೇಲೆ ಒಂದಿಷ್ಟು ಪ್ರಯತ್ನ ಮಾಡಿದೆ. ಸಿನಿಮಾ ಮಾಡಿದ ನಂತರ ನಟನೆಯಲ್ಲಿ ಪಳಗಬೇಕು ಎಂದು ನಾಟಕಗಳಲ್ಲಿ ಅಭಿನಯಿಸುತ್ತಾ ಅಭಿನಯವನ್ನು ಕಲಿಯುತ್ತಾ ಬಂದಿದ್ದೇನೆ.

❖ *ವರುಣ್ ಪಾತ್ರ ಹೇಗಿದೆ?*

ಆಗರ್ಭ ಶ್ರೀಮಂತ ಅಜ್ಜಿಯೊಬ್ಬರ ಸಹಾಯಕ ಉದ್ಯೋಗಿ ಪಶುಪತಿ ಅಂತ ಇದ್ದಾರೆ. ಅವರ ತಂಗಿಯ ಮಗ ನಾನು. ನನಗೆ ಸ್ವಂತ ಗ್ಯಾರೇಜ್ ತೆರೆಯುವ ಆಶೆಯಿದೆ. ಆಟೋಮೊಬೈಲ್‌ನಲ್ಲಿ ತುಂಬಾ ಆಸಕ್ತಿ ಇದೆ. ಎಂತಹ ಡಕೋಟಾ ಕಾರು ಕೊಟ್ಟರೂ ಅದನ್ನು ಸುಂದರಗೊಳಿಸುತ್ತೇನೆ. ಹಳೆ ಕಾರಿಗೂ ಆಧುನಿಕ ಆಲ್ಟ್ರೇಷನ್ ಮಾಡುತ್ತೇನೆ. ನೇರ ನಡೆ ನುಡಿಯ ಗುಣ ನನ್ನದಾದರೆ, ನನ್ನ ಜೊತೆಗೆ ಮಹಾರಾಣಿಯಾಗಿ ನಟಿಸಿರುವ ರಶ್ಮಿತಾ ಪಾತ್ರ ಶೃಂಗಾರದಿಂದ ಕೂಡಿದೆ. ಇದು ಯುವಕರನ್ನೂ ಆಕರ್ಷಿಸಬಹುದು ಎಂದೆನಿಸುತ್ತದೆ.

■ **ರಾಘವೇಂದ್ರ**